ಇದರ ಬಗ್ಗೆ ನನ್ನ ಗಮನಕ್ಕೆ ತಂದಿದ್ದಾರೆ, ನಾನೇ ಸ್ವತ: ಕೈಗಾರಿಕಾ ಸಚಿವನಾಗಿ ಅಲ್ಲಿಗೆ ಭೇಟಿ ಕೊಟ್ಟು ಅಲ್ಲಿ ಏನು ಮಾಡುವುದಕ್ಕೆ ಸಾಧ್ಯವಿದೆ ಅದೆಲ್ಲವನ್ನೂ ಮಾಡಲು ಪ್ರಯತ್ನಗಳನ್ನು ಮಾಡಲಾಗುವುದು.

ಶ್ರೀಮತಿ ಕೆ.ವಿ. ಅನುಸೂಯಮ್ಮ ನಟರಾಜನ್:- ರಂಗಧಾಮ ಚಾನಲ್ ಹತ್ತಿರ ಪ್ರವಾಸಿ ಮಂದಿರವೊಂದು ಬೇಕೆಂದು ಕೇಳಿದ್ದೇನೆ. ಅಲ್ಲಿನ ಸುತ್ತಮುತ್ತಲೂ ವಿಶಾಲವಾದ ಬೆಟ್ಟ ಗುಡ್ಡಗಳು ಇದೆ. ಮಳೆ ಬಿದ್ದರೆ ನೀರಿನ ಜುಳು ಜುಳು ಶಬ್ದಗಳು ಬರುತ್ತದೆ. ಹಕ್ಕಿಗಳು ಸುಂದರವಾಗಿ ಚಿಲಿಪಿಲಿ ಹಾಡುತ್ತವೆ. ಆದ್ದರಿಂದ ಮಾನ್ಯ ಅಧ್ಯಕ್ಷರು ಕೋಲಾರ ಜಿಲ್ಲೆಯಲ್ಲಿರುವ ಸುಂದರವಾದ ಚಿಕ್ಕ ಬಳ್ಳಾಪುರವನ್ನು ಗಮನಿಸಬೇಕು. ಈ ಚಾನಲ್ ತುಂಬಿದರೆ ಎಂಟು ಹತ್ತು ಕೆರೆಗಳು ತುಂಬುತ್ತದೆ. ಆದ್ದರಿಂದ ಇಂಥ ಜಾಗದಲ್ಲಿ ಪ್ರವಾಸಿ ಮಂದಿರವೊಂದನ್ನು ಸ್ಥಾಪಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ನಾನೂ ಕೋಲಾರ ಜಿಲ್ಲೆಯವನಾಗಿ ಅವರ ಮಾತಿಗೆ ದ್ವನಿಗೂಡಿಸುತ್ತಿದ್ದೇನೆ.

ಶ್ರೀ ಆರ್.ವಿ. ದೇಶ್‌ಪಾಂಡೆ:- ನಾನೂ ಮತ್ತು ಅಧ್ಯಕ್ಷರು ಒಟ್ಟಿಗೇ ಅಲ್ಲಿಗೆ ಭೇಟಿ ಕೊಡೋಣ. ತಾವು ಏನು ಆದೇಶ ಕೊಡುತ್ತೀರೋ ಅದನ್ನು ಮಾಡುತ್ತೇವೆ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು. ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಇಲಾಖೆಯ ಸಚಿವರು) :- ಮಾನ್ಯ ಅಧ್ಯಕ್ಷರೆ, ದಿನಾಂಕ: 10.3.2003ರ ಲಿಖಿತ ಮೂಲಕ ಉತ್ತರಿಸುವ 150 ಪ್ರಶ್ನೆಗಳ ಪೈಕಿ 125 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ಅನುಬಂಧ (ಅ)

ಅಧ್ಯಕ್ಷರು:- ಮಂಡಿಸಲಾಯಿತು. ದಿನಾಂಕ:- 7.3.2003ರ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 6 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 129 ಪ್ರಶ್ನೆಗಳ ಪೈಕಿ 66 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ಅನುಬಂಧ (ಆ)

(2) ಚುನಾವಣಾ ಪ್ರಸ್ತಾಪ

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಇಲಾಖೆಯ ಸಚಿವರು) (ಶ್ರೀ ಡಿ.ಬಿ. ಚಂದ್ರೇಗೌಡರ ಪರವಾಗಿ) :- ಮಾನ್ಯ ಅಧ್ಯಕ್ಷರೆ, 1992ನೇ ಇಸವಿಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ನಿಯಮಾವಳಿ ನಿಯಮ 18 (1) (8) ರ ಪ್ರಕಾರ ಏಕಲ ಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥಾಪನ ಮಂಡಳಿಗೆ ಒಬ್ಬ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುವುದು.

ಅಧ್ಯಕ್ಷರು:- ಪ್ರಸ್ತಾಪ ಮಂಡಿಸಲಾಯಿತು. ಇನ್ನು ಶೂನ್ಯ ವೇಳೆ.

(3) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ:- ಬೆಂಗಳೂರು ನಗರದಲ್ಲಿನ ಪಾರ್ಕಿಂಗ್ ಫೀ ಬಗ್ಗೆ.

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) :- ಮಾನ್ಯ ಅಧ್ಯಕ್ಷರೆ,